**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೈದನೆಯ ಅಧಿವೇಶನ**

# ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–27)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರಡಿಯಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಯ ಭಾಗದಲ್ಲಿ 15 ಎಕರೆಗಳು 17.5 ಗುಂಟೆಗಳ ವ್ಯಾಪ್ತಿಯಷ್ಟನ್ನು ಮೂಲಸೌಕರ್ಯ ಯೋಜನೆಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿತ್ತು, ಅದರಲ್ಲಿ 1217.41 ಚದರ ಮೀಟರ್‌ಗಳಷ್ಟನ್ನು ಮಾತ್ರ ವಾಸ್ತವವಾಗಿ ಬಳಸಲಾಗಿರುವುದರಿಂದ;

ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 14ಬಿ ಪ್ರಕರಣದಡಿಯಲ್ಲಿನ ಯಾವುದೇ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅನುಸಾರ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಗೆ ಅನ್ವಯಿಸುವುದಿಲ್ಲವಾದ್ದರಿಂದ;

ಮತ್ತು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅನುಸೂಚಿ Iರಲ್ಲಿ ವಿವರಿಸಲಾದ ಭೂಮಿಯ ಯಾವುದೇ ಭಾಗವನ್ನು ಬಳಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದು ಅಗತ್ಯವಾಗಿರುವುದರಿಂದ;

ಮತ್ತು ರಾಜ್ಯ ಸರ್ಕಾರವು ಯಾವುದೇ ಮೂಲಸೌಕರ್ಯ ಯೋಜನೆಗಾಗಿ ಭೂಮಿಯ ಭಾಗವನ್ನು ಬಳಸಲಾಗಿದ್ದರೆ, ಯಾವುದೇ ಅಂಥ ಮೂಲಸೌಕರ್ಯ ಯೋಜನೆಯಲ್ಲಿ ಪೂರ್ಣವಾಗಿ ಅಥವಾ ಭಾಗಶಃ ಮುಂದುವರಿಯದಿರಲು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಸಲಹೆ ನೀಡಲಾಗಿದ್ದರೆ, ಅದು ಅದನ್ನು ತೀರ್ಮಾನಿಸಬಹುದಾಗಿರುವುದರಿಂದ;

ಮತ್ತು ರಾಜ್ಯ ಸರ್ಕಾರವು ಅಗತ್ಯವಿದ್ದಲ್ಲಿ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅನುಸೂಚಿ Iರಲ್ಲಿ ವಿವರಿಸಿದ ಭೂಮಿಯನ್ನು ಒಳಗೊಂಡು, ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಯ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಮೂಲಸೌಕರ್ಯ ಯೋಜನೆಯಲ್ಲಿ ಮುಂದುವರಿಯಲು ಪರಿಗಣಿಸಬಹುದಾಗಿರುವುದರಿಂದ;

ಹಾಗೂ ಯಾವುದೇ ಸದರಿ ಬಳಕೆಗಾಗಿ ಪಾವತಿಸಲಾದ ಯಾವುದೇ ನಷ್ಟಪರಿಹಾರವನ್ನು, ವಾಸ್ತವಿಕವಾಗಿ ಬಳಸಲಾದ ಪ್ರದೇಶಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ 8ನೇ ಪ್ರಕರಣದಲ್ಲಿರುವಂತೆ ಪಾವತಿಸಬೇಕಾದ ಮೊತ್ತಕ್ಕೆ ಅನುಗುಣವಾಗಿ ಲೆಕ್ಕಹಾಕುವುದು, ಮತ್ತು ಯಾವುದೇ ಅಂಥ ಪಾವತಿಸತಕ್ಕ ನಷ್ಟಪರಿಹಾರವನ್ನು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅಡಿಯಲ್ಲಿನ ಒಟ್ಟಾರೆ ನಷ್ಟಪರಿಹಾರದಿಂದ ಪ್ರಮಾಣಾನುಸಾರವಾಗಿ ಕಟಾವಣೆಯಾಗತಕ್ಕದ್ದು;

ಮತ್ತು ಈಗ ಈ ಪ್ರಸ್ತಾವಿತ ತಿದ್ದುಪಡಿ ಅಧಿನಿಯಮವು ಮೇಲಿನ ಉದ್ದೇಶಗಳನ್ನು ಸಾಧಿಸಲು ಮತ್ತು ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ 14)ನ್ನು ಅದಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡಲು ಉದ್ದೇಶಿಸಿದೆ.

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು, ಅನ್ವಯ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಬೆಂಗಳೂರು ಅರಮನೆಗೆ ಅನ್ವಯವಾಗತಕ್ಕದ್ದು.

(3) ಇದು 27ನೇ ಜನವರಿ 2025ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ 14)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) (ಡಿ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಡಿ) "ನಷ್ಟಪರಿಹಾರ"ವು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ 8ನೇ ಪ್ರಕರಣದಲ್ಲಿರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು; ಮತ್ತು, ಬಳಸಿರುವ ಅಥವಾ ಬಳಸಲಾಗುವ ಬೆಂಗಳೂರು ಅರಮನೆಯ ಯಾವುದೇ ಭಾಗಕ್ಕಾಗಿ, ನಷ್ಟಪರಿಹಾರವು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಉಪಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು ಹಾಗೂ ಯಾವುದೇ ಅಂಥ ಪರಿಹಾರವನ್ನು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರಡಿಯಲ್ಲಿ ಪಾವತಿಸಬೇಕಾದ ಒಟ್ಟು ನಷ್ಟಪರಿಹಾರಕ್ಕೆ ಸರಿಹೊಂದಿಸತಕ್ಕದ್ದು.

**ವಿವರಣೆ:-** ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಪ್ರಕರಣ 14ಬಿ ಹಿನ್ನೆಲೆಯಲ್ಲಿ, ಯಾವುದೇ ಮೂಲಸೌಕರ್ಯ ಯೋಜನೆಗಳು ಅಥವಾ ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ, ಯಾವುದೇ ಬಳಕೆಗೆ ಸಂಬಂಧಿಸಿದಂತೆ ನಷ್ಟಪರಿಹಾರವಾಗಿ ಯಾವುದೇ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳನ್ನು ಅಥವಾ ಅನ್ಯಥಾ ಪಾವತಿಸತಕ್ಕದ್ದಲ್ಲವೆಂದು ಸ್ಪಷ್ಟಪಡಿಸಲಾಗಿದೆ.

(ii) (ಎಫ್) ಖಂಡವನ್ನು ಬಿಟ್ಟುಬಿಡತಕ್ಕದ್ದು.

**3. ಪ್ರಕರಣ 3ರ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,-

(i) (2)ನೇ ಉಪ-ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಈ ಮೊದಲು ತೆಗೆದುಕೊಂಡ ಯಾವುದೇ ತೀರ್ಮಾನದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು (1)ನೇ ಉಪ-ಪ್ರಕರಣದಲ್ಲಿನ ಯಾವುದೇ ಮೂಲಸೌಕರ್ಯ ಯೋಜನೆಗೆ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಮುಂದುವರೆಯದಿರಲು ಅಧಿಕಾರವನ್ನು ಹೊಂದಿರತಕ್ಕದ್ದು."

(ii) (5)ನೇ ಉಪ-ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(5) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಬೆಂಗಳೂರು ಅರಮನೆಯ ಯಾವುದೇ ಭಾಗದ ಸಂದರ್ಭದಲ್ಲಿ, ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮೊದಲು ಮತ್ತು ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಆದೇಶವನ್ನು ಪಾಲಿಸುವಲ್ಲಿ ರಾಜ್ಯ ಸರ್ಕಾರದ ಯಾವುದೇ ನಿರ್ಧಾರದ ಅನುಸಾರವಾಗಿ ಯಾವುದೇ ನಷ್ಟಪರಿಹಾರವನ್ನು ಈಗಾಗಲೇ ಪಾವತಿಸಿದ್ದರೆ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರಡಿ ಪಾವತಿಸಬಹುದಾದ ನಷ್ಟಪರಿಹಾರದ ಪ್ರತಿಯಾಗಿ ಅದನ್ನು ಸರಿಹೊಂದಿಸತಕ್ಕದ್ದು."

(iii) (6)ನೇ ಉಪ-ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**4. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ,-

(i) (1)ನೇ ಉಪ-ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಈ ಅಧಿನಿಯಮದ ಉದ್ದೇಶಕ್ಕಾಗಿ, ಬಳಸಲಾದ ಬೆಂಗಳೂರು ಅರಮನೆಯ ಯಾವುದೇ ಭಾಗಕ್ಕಾಗಿ, ನಷ್ಟಪರಿಹಾರವನ್ನು ಈ ಅಧಿನಿಯಮದ 2ನೇ ಪ್ರಕರಣದ (ಡಿ) ಖಂಡದಲ್ಲಿ ಪರಿಭಾಷಿಸಿದಂತೆ ಪಾವತಿಸತಕ್ಕದ್ದು.";

(ii) (2)ನೇ ಉಪ-ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(2) ಈ ಅಧಿನಿಯಮದ 3ನೇ ಪ್ರಕರಣದ (1)ನೇ ಉಪಪ್ರಕರಣದಡಿ ಬಳಸಲಾದ ಬೆಂಗಳೂರು ಅರಮನೆಯ ಯಾವುದೇ ಭಾಗಕ್ಕಾಗಿನ ನಷ್ಟಪರಿಹಾರದ ಲೆಕ್ಕಾಚಾರದ ಉದ್ದೇಶಕ್ಕಾಗಿ, ಹಾಗೆ ಬಳಸಲಾದ ಭೂಮಿಗೆ ಪಾವತಿಸಬಹುದಾದ ನಷ್ಟ ಪರಿಹಾರದ ಪ್ರಮಾಣವು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 8ನೇ ಪ್ರಕರಣ ಮತ್ತು 9ನೇ ಪ್ರಕರಣದ ಅನುಸಾರ ಆರ್ಜಿಸಲಾದ ಒಟ್ಟು ಭೂಮಿಗೆ ಪಾವತಿಸಬೇಕಾದ ನಷ್ಟಪರಿಹಾರಕ್ಕೆ ಪ್ರಮಾಣಾನುಸಾರವಾಗಿರತಕ್ಕದ್ದು."

(iii) (3)ನೇ ಉಪ-ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(3) ಕ್ಲೇಮುದಾರನಿಗೆ ಸಂದಾಯ ಮಾಡಬಹುದಾದ ನಷ್ಟಪರಿಹಾರವು ಮುಂದಿನಂತಿರತಕ್ಕದ್ದು:

(ಎ) ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಉಪಬಂಧಗಳಡಿ ಆರ್ಜಿಸಲಾದ ಒಟ್ಟು ಭೂಮಿಯ ಪ್ರತಿಯಾಗಿರುವಂತೆ ಬಳಸಲಾದ ಭೂ

ವ್ಯಾಪ್ತಿಯ ಪ್ರಮಾಣಾನುಸಾರವಾಗಿರುವ (2)ನೇ ಉಪಪ್ರಕರಣದ ಪ್ರಕಾರ ಪ್ರಮಾಣಾನುಸಾರ ಮೌಲ್ಯದ ಮೊತ್ತ; ಮತ್ತು

(ಬಿ) ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಪ್ರಕರಣ 13ರಡಿ ಕಮೀಷನರನು ನಿರ್ಧರಿಸಬಹುದಾದಂತೆ ಅಂತಿಮ ನಷ್ಟ ಪರಿಹಾರದ ಪಾವತಿಗೆ ಸರಿಹೊಂದಿಸತಕ್ಕದ್ದು.

(iv) (5)ನೇ ಉಪ-ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರಡಿಯಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಯ ಭಾಗದಲ್ಲಿ 15 ಎಕರೆಗಳು 17.5 ಗುಂಟೆಗಳ ವ್ಯಾಪ್ತಿಯಷ್ಟನ್ನು ಮೂಲಸೌಕರ್ಯ ಯೋಜನೆಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿತ್ತು, ಅದರಲ್ಲಿ 1217.41 ಚದರ ಮೀಟರ್‌ಗಳಷ್ಟನ್ನು ಮಾತ್ರ ವಾಸ್ತವವಾಗಿ ಬಳಸಲಾಗಿರುವುದರಿಂದ;

ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 14ಬಿ ಪ್ರಕರಣದಡಿಯಲ್ಲಿನ ಯಾವುದೇ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅನುಸಾರ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಗೆ ಅನ್ವಯಿಸುವುದಿಲ್ಲವಾದ್ದರಿಂದ;

ಮತ್ತು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅನುಸೂಚಿ Iರಲ್ಲಿ ವಿವರಿಸಲಾದ ಭೂಮಿಯ ಯಾವುದೇ ಭಾಗವನ್ನು ಬಳಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದು ಅಗತ್ಯವಾಗಿರುವುದರಿಂದ;

ಮತ್ತು ರಾಜ್ಯ ಸರ್ಕಾರವು ಯಾವುದೇ ಮೂಲಸೌಕರ್ಯ ಯೋಜನೆಗಾಗಿ ಭೂಮಿಯ ಭಾಗವನ್ನು ಬಳಸಲಾಗಿದ್ದರೆ, ಯಾವುದೇ ಅಂಥ ಮೂಲಸೌಕರ್ಯ ಯೋಜನೆಯಲ್ಲಿ ಪೂರ್ಣವಾಗಿ ಅಥವಾ ಭಾಗಶಃ ಮುಂದುವರಿಯದಿರಲು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಸಲಹೆ ನೀಡಲಾಗಿದ್ದರೆ, ಅದು ಅದನ್ನು ತೀರ್ಮಾನಿಸಬಹುದಾಗಿರುವುದರಿಂದ;

ಮತ್ತು ರಾಜ್ಯ ಸರ್ಕಾರವು ಅಗತ್ಯವಿದ್ದಲ್ಲಿ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅನುಸೂಚಿ Iರಲ್ಲಿ ವಿವರಿಸಿದ ಭೂಮಿಯನ್ನು ಒಳಗೊಂಡು, ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಯ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಮೂಲಸೌಕರ್ಯ ಯೋಜನೆಯಲ್ಲಿ ಮುಂದುವರಿಯಲು ಪರಿಗಣಿಸಬಹುದಾಗಿರುವುದರಿಂದ;

ಹಾಗೂ ಯಾವುದೇ ಸದರಿ ಬಳಕೆಗಾಗಿ ಪಾವತಿಸಲಾದ ಯಾವುದೇ ನಷ್ಟಪರಿಹಾರವನ್ನು, ವಾಸ್ತವಿಕವಾಗಿ ಬಳಸಲಾದ ಪ್ರದೇಶಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ 8ನೇ ಪ್ರಕರಣದಲ್ಲಿರುವಂತೆ ಪಾವತಿಸಬೇಕಾದ ಮೊತ್ತಕ್ಕೆ ಅನುಗುಣವಾಗಿ ಲೆಕ್ಕಹಾಕುವುದು, ಮತ್ತು ಯಾವುದೇ ಅಂಥ ಪಾವತಿಸತಕ್ಕ ನಷ್ಟಪರಿಹಾರವನ್ನು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಅಡಿಯಲ್ಲಿನ ಒಟ್ಟಾರೆ ನಷ್ಟಪರಿಹಾರದಿಂದ ಪ್ರಮಾಣಾನುಸಾರವಾಗಿ ಕಟಾವಣೆಯಾಗತಕ್ಕದ್ದು;

ಮತ್ತು ಈಗ ಈ ಪ್ರಸ್ತಾವಿತ ಶಾಸನವು ಮೇಲಿನ ಉದ್ದೇಶಗಳನ್ನು ಸಾಧಿಸಲು ಮತ್ತು ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ 14)ನ್ನು ಅದಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡಲು ಉದ್ದೇಶಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಸಿದ್ಧರಾಮಯ್ಯ**
ಮುಖ್ಯಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ 14)ರ ಉದ್ಧೃತ ಭಾಗ

**X X XX XX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:

(ಎ) "**ಬೆಂಗಳೂರು ಅರಮನೆ**" ಯು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ 2ನೇ ಪ್ರಕರಣದ ಖಂಡ (2)ರಲ್ಲಿ ಪರಿಭಾಷಿಸಲಾದಂತೆ ಅದೇ ಅರ್ಥವನ್ನು ಹೊಂದಿರತಕ್ಕದ್ದು.

(ಬಿ) "**ಮೂಲಸೌಕರ್ಯ ಯೋಜನೆ**"ಯು ಹೆಚ್ಚಿನ ಸಾರ್ವಜನಿಕ ಹಿತಾಸಕ್ತಿಯಲ್ಲಿನ ಯಾವುದೇ ಮೂಲಸೌಕರ್ಯ ಯೋಜನೆಯನ್ನು ಒಳಗೊಳ್ಳತಕ್ಕದ್ದು.

(ಸಿ) "**ಕ್ಲೇಮುದಾರರು**" ಎಂಬುದು,

(i) ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ 2ನೇ ಪ್ರಕರಣದ (5) ನೇ ಖಂಡದಲ್ಲಿ ಪರಿಭಾಷಿಸಲಾದಂತೆ "**ಕಾನೂನುಸಮ್ಮತ ಪ್ರತಿನಿಧಿಗಳು**" ಮತ್ತು "**ವಾರಸುದಾರರು**" ಎಂಬ, ಹಾಗೂ

(ii) ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ 2ನೇ ಪ್ರಕರಣದ (6) ನೇ ಖಂಡದಲ್ಲಿ ಪರಿಭಾಷಿಸಲಾದಂತೆ "**ಇತರರು**" "**ಇತರ ವ್ಯಕ್ತಿಗಳು**" ಮತ್ತು "**ಇತರ ಹಿತಾಸಕ್ತ ವ್ಯಕ್ತಿಗಳು**" ಎಂಬ,

- ಅದೇ ಅರ್ಥವನ್ನು ಹೊಂದಿರತಕ್ಕದ್ದು.

(ಡಿ) "**ನಷ್ಟಪರಿಹಾರ**"ವು ಸಂದಾಯ ಮಾಡಬಹುದಾದ ಯಾವುದೇ ಮೊತ್ತವನ್ನು ಒಳಗೊಳ್ಳತಕ್ಕದ್ದು ಮತ್ತು ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳನ್ನೂ ಸಹ ಒಳಗೊಳ್ಳತಕ್ಕದ್ದು.

(ಇ) "**ಕಮೀಷನರ್**" ಎಂಬುದು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ 2ನೇ ಪ್ರಕರಣದ (4)ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಅದೇ ಅರ್ಥವನ್ನು ಹೊಂದಿರತಕ್ಕದ್ದು.

(ಎಫ್) "**ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳು**" ಎಂಬುದು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಅಭಿವೃದ್ಧಿ ಹಕ್ಕುಗಳ ಪ್ರಯೋಜನ) ನಿಯಮಗಳು, 2016ರೊಂದಿಗೆ ಓದಿಕೊಂಡಂತೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1996ರ ಕರ್ನಾಟಕ ಅಧಿನಿಯಮ 18)ರ 14ಬಿ ಪ್ರಕರಣದ (28)ನೇ ಉಪ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಲಾದಂತೆ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**X X XX XX**

**3. ಮೂಲಸೌಕರ್ಯ ಯೋಜನೆಗಾಗಿ ಭೂಮಿಯ ಬಳಕೆ.-** (1) ಯಾವುದೇ ಮೂಲಸೌಕರ್ಯ ಯೋಜನೆಯ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ 4ನೇ ಪ್ರಕರಣದಲ್ಲಿ ಬರುವ ಬೆಂಗಳೂರು ಅರಮನೆಯ ಯಾವುದೇ ಭಾಗವನ್ನು ಬಳಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಆದೇಶ ಅಥವಾ ರಾಜ್ಯ ಸರ್ಕಾರವು ಈ ಮೊದಲು ತೆಗೆದುಕೊಂಡ ಯಾವುದೇ ತೀರ್ಮಾನದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು (1)ನೇ ಉಪಪ್ರಕರಣದಲ್ಲಿನ ಯಾವುದೇ ಮೂಲಸೌಕರ್ಯ ಯೋಜನೆಗೆ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಮುಂದುವರೆಯದಿರಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ರಾಜ್ಯ ಸರ್ಕಾರವು (2)ನೇ ಉಪಪ್ರಕರಣದಲ್ಲಿನ ಯಾವುದೇ ಮೂಲಸೌಕರ್ಯ ಯೋಜನೆಗೆ ಮುಂದುವರೆಯದಿರಲು ತೀರ್ಮಾನಿಸಿದಲ್ಲಿ, ಅದು,-

(ಎ) ಉಪಪ್ರಕರಣ (1)ರಡಿ ಬಳಸಲು ಉದ್ದೇಶಿಸಿರುವ ಆದರೆ ತರುವಾಯ ಉಪಪ್ರಕರಣ (2)ರಡಿ ಮುಂದುವರೆಯದಿರುವ ಅಥವಾ ಬಳಸದಿರುವ ಬೆಂಗಳೂರು ಅರಮನೆಯ ಭಾಗಾಂಶದ ಭಾಗವನ್ನು ಪೂರ್ವಸ್ಥಿತಿಗೆ ತರತಕ್ಕದ್ದು;

(ಬಿ) ಈ ಮೊದಲು ಅಂಥ ಭೂಮಿಯನ್ನು ಉಪಪ್ರಕರಣ (1)ರಡಿ ಬಳಸಲು ಉದ್ದೇಶಿಸಿರುವ ಆದರೆ ತರುವಾಯ ಉಪಪ್ರಕರಣ (2)ರಡಿ ಮುಂದುವರೆಯದಿರುವ ಅಥವಾ ಬಳಸದಿರುವ ಬೆಂಗಳೂರು ಅರಮನೆಯ ಭಾಗಾಂಶದ ಭಾಗದ ಸ್ವಾಧೀನವನ್ನು ಪೂರ್ವಸ್ಥಿತಿಗೆ ತರತಕ್ಕದ್ದು; ಮತ್ತು

(ಸಿ) (ಎ) ಮತ್ತು (ಬಿ)ಗಳಿಗಾಗಿನ ಒಟ್ಟಾರೆ ವೆಚ್ಚವನ್ನು ಭರಿಸತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪಪ್ರಕರಣದಡಿ ಬೆಂಗಳೂರು ಅರಮನೆಯ ಭಾಗಾಂಶದ ಯಾವುದೇ ಭಾಗವನ್ನು ರಾಜ್ಯ ಸರ್ಕಾರವು ಬಳಸಿದ್ದರೆ, 4ನೇ ಪ್ರಕರಣದಡಿ ಈ ಅಧಿನಿಯಮದ ಅನುಸಾರ ರಾಜ್ಯ ಸರ್ಕಾರವು ಕ್ಲೇಮುದಾರರಿಗೆ ನಷ್ಟಪರಿಹಾರವನ್ನು ಪಾವತಿಸತಕ್ಕದ್ದು

(5) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಬೆಂಗಳೂರು ಅರಮನೆಯ ಯಾವುದೇ ಭಾಗದ ಸಂದರ್ಭದಲ್ಲಿ, ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮೊದಲು ಮತ್ತು ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಆದೇಶವನ್ನು ಪಾಲಿಸುವಲ್ಲಿ ರಾಜ್ಯ ಸರ್ಕಾರದ ಯಾವುದೇ ನಿರ್ಧಾರದ ಅನುಸಾರವಾಗಿ ಯಾವುದೇ ನಷ್ಟಪರಿಹಾರವನ್ನು ಈಗಾಗಲೇ ಪಾವತಿಸಿದ್ದರೆ, ಅಧಿನಿಯಮದ 4ನೇ ಪ್ರಕರಣವು ಅನ್ವಯವಾಗತಕ್ಕದ್ದಲ್ಲ.

(6) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಬೆಂಗಳೂರು ಅರಮನೆಯ ಯಾವುದೇ ಭಾಗದ ಸಂದರ್ಭದಲ್ಲಿ, ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪಿಗೆ ಅನುಸಾರವಾಗಿ ಯಾವುದೇ ನಷ್ಟ ಪರಿಹಾರವನ್ನು ಪಾವತಿಸಿದ್ದರೆ, ಅಧಿನಿಯಮದ 6ನೇ ಪ್ರಕರಣದಡಿ ರಾಜ್ಯ ಸರ್ಕಾರದ ಕ್ರಮವು ರಕ್ಷಿತವಾಗತಕ್ಕದ್ದು.

**X X XX XX**

**4. ಬಳಕೆಗಾಗಿ ಸಂದಾಯ ಮಾಡಬಹುದಾದ ನಷ್ಟಪರಿಹಾರ.-** (1) ಈ ಅಧಿನಿಯಮಕ್ಕೆ ವಿರುದ್ಧವಾದುದು, ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಯಾವುದೇ ಆದೇಶ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ನಷ್ಟಪರಿಹಾರದ ಉದ್ದೇಶಕ್ಕಾಗಿ ಭೂಮಿಯ ಮಾರ್ಗಸೂಚಿ ಮೌಲ್ಯವು ಈ ಅಧಿನಿಯಮದ ಅನುಸಾರವಾಗಿರತಕ್ಕದ್ದು.

(2) ಈ ಅಧಿನಿಯಮದ 3ನೇ ಪ್ರಕರಣದ (1)ನೇ ಉಪಪ್ರಕರಣದಡಿ ಬಳಸಲಾದ ಬೆಂಗಳೂರು ಅರಮನೆಯ ಯಾವುದೇ ಭಾಗಕ್ಕಾಗಿನ ನಷ್ಟಪರಿಹಾರದ ಲೆಕ್ಕಾಚಾರದ ಉದ್ದೇಶಕ್ಕಾಗಿ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 8ನೇ ಪ್ರಕರಣ ಮತ್ತು 9ನೇ ಪ್ರಕರಣದ ಅನುಸಾರವಾಗಿ ಪ್ರಮಾಣಾನುಸಾರ ಮೌಲ್ಯವಾಗಿರತಕ್ಕದ್ದು, ಅದನ್ನು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರಡಿ ಗೊತ್ತುಪಡಿಸಿದ ದಿನಾಂಕದಿಂದ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ 45ಬಿ ಪ್ರಕರಣದಡಿ ಮಾರ್ಗಸೂಚಿ ಮೌಲ್ಯವೆಂದು ಭಾವಿಸತಕ್ಕದ್ದು.

**ವಿವರಣೆ I.-** "ಮಾರ್ಗಸೂಚಿ ಮೌಲ್ಯ" ನಿರ್ಧರಣೆಗಾಗಿ, ಯಾವುದೇ ತೀರ್ಪು ಅಥವಾ ನ್ಯಾಯಾಲಯದ ಆದೇಶದ ವಿರುದ್ಧವಾಗಿ ಏನೇ ಇದ್ದರೂ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ 18)ರ ಪ್ರಕಾರ ಮೌಲ್ಯನಿರ್ಧರಣೆಯನ್ನು ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿ ಮಾರ್ಗಸೂಚಿ ಮೌಲ್ಯವೆಂದು ಭಾವಿಸತಕ್ಕದ್ದು.

**ವಿವರಣೆ II.-** "ಗೊತ್ತುಪಡಿಸಿದ ದಿನಾಂಕ" ಎಂಬ ಪದಾವಳಿಯು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1957ರ ಕರ್ನಾಟಕ ಅಧಿನಿಯಮ 34)ರ 2ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಇರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು, ಅಂದರೆ 21.11.1996.

(3) ಕ್ಲೇಮುದಾರನಿಗೆ ಸಂದಾಯ ಮಾಡಬಹುದಾದ ನಷ್ಟಪರಿಹಾರವು ಈ ಮುಂದಿನಂತಿರತಕ್ಕದ್ದು:

(ಎ) ಭೂ ವ್ಯಾಪ್ತಿಯ ಪ್ರಮಾಣಾನುಸಾರ (2)ನೇ ಉಪಪ್ರಕರಣದ ಪ್ರಕಾರ ಪ್ರಮಾಣಾನುಸಾರ ಮೌಲ್ಯದ ಮೊತ್ತ ಅಥವಾ ಸಂದರ್ಭಾನುಸಾರ,

(ಬಿ) ಉಪಪ್ರಕರಣ (2)ರ ಪ್ರಕಾರ ಪ್ರಮಾಣಾನುಸಾರ ಮೌಲ್ಯದ ಮೇಲೆ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳು.

(4) ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪು ಏನೇ ಇದ್ದರೂ, ಈ ಅಧಿನಿಯಮದ ಮೂಲಕ ನಿಯಮಿಸಲಾದುದಕ್ಕೆ ಹೊರತಾಗಿ ಕ್ಲೇಮುದಾರರು ಯಾವುದೇ ಇತರೆ ನಷ್ಟಪರಿಹಾರದ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(5) ಈ ಅಧಿನಿಯಮದ ಮೇರೆಗಿನ ನಷ್ಟಪರಿಹಾರವನ್ನು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1957ರ ಕರ್ನಾಟಕ ಅಧಿನಿಯಮ 34)ರ 13ನೇ ಪ್ರಕರಣದಡಿ ಕಮೀಷನರ್ ನಿರ್ಧರಿಸಿದಂತೆ ಅಂತಿಮ ನಷ್ಟಪರಿಹಾರ ಸಂದಾಯಕ್ಕೆ ಪ್ರಮಾಣಾನುಸಾರವಾಗಿ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

(6) ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1957ರ ಕರ್ನಾಟಕ ಅಧಿನಿಯಮ 34)ರ 8ನೇ ಪ್ರಕರಣ ಮತ್ತು 9ನೇ ಪ್ರಕರಣದೊಂದಿಗೆ ಅಸಂಗತವಾದ ನಷ್ಟಪರಿಹಾರದ ಸಂದರ್ಭದಲ್ಲಿ, ಕ್ಲೇಮುದಾರರು (3)ನೇ ಉಪಪ್ರಕರಣದಡಿ ಯಾವುದೇ ಅಂಥ ನಷ್ಟಪರಿಹಾರದ ಬಳಕೆಗೆ ನಷ್ಟಭರ್ತಿಗಾಗಿ ಸರ್ಕಾರಕ್ಕೆ ಹೊಣೆಗಾರರಾಗಿರತಕ್ಕದ್ದು.

(7) ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪಿಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿಗೆ ವಿರುದ್ಧವಾದುದು ಏನೇ ಇದ್ದರೂ, ಈ ಅಧಿನಿಯಮದೊಂದಿಗೆ ಓದಲಾದಂತೆ ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1957ರ ಕರ್ನಾಟಕ ಅಧಿನಿಯಮ 34)ರ 8ನೇ ಪ್ರಕರಣ ಮತ್ತು 9ನೇ ಪ್ರಕರಣದಲ್ಲಿ ನಿರ್ಧರಿಸಲಾದ ನಷ್ಟಪರಿಹಾರವು ಅಂತಿಮವಾಗಿರತಕ್ಕದ್ದು.

(8) ಈ ಅಧಿನಿಯಮದೊಂದಿಗೆ ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪಿನ ಯಾವುದೇ ಅಸಂಗತತೆಯ ಸಂದರ್ಭದಲ್ಲಿ, 3ನೇ ಪ್ರಕರಣದ (1)ನೇ ಉಪಪ್ರಕರಣದಡಿ ಬಳಸಲಾದ ಭೂಮಿಗಳ ನಷ್ಟಪರಿಹಾರದ ನಿರ್ಧರಣೆಗಾಗಿ, ಈ ಅಧಿನಿಯಮದ ಉಪಬಂಧಗಳು ಪ್ರಭಾವಿಯಾಗಿರತಕ್ಕದ್ದು.

**X X XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 21ನೇ ಮಾರ್ಚ್ 2025

**KARNATAKA LEGISLATIVE COUNCIL**

**ONE HUNDRED AND FIFTY FIFTH SESSION**

# THE BANGALORE PALACE (UTILIZATION AND REGULATION OF LAND) (AMENDMENT) BILL, 2025

**(LA Bill No. 27 of 2025)**

**(As passed by the Karnataka Legislative Assembly)**

Whereas the part of the land which was acquired under the Bangalore Palace (Acquisition and Transfer) Act, 1996, was sought to be utilized for an infrastructure project to the extent of 15 acres 17.5 gunta, out of which only 1217.41 square meters has been actually utilized;

And whereas no transferable development rights under section 14B of the Karnataka Town and Country Planning Act, 1961 (Karnataka Act 11 of 1963) will apply to the land vested with the Government pursuant to the Bangalore Palace (Acquisition and Transfer) Act, 1996 (Karnataka Act 18 of 1996);

And whereas it is necessary to empower the State Government to utilize any part of the land that is described in Schedule I of the Bangalore Palace (Acquisition and Transfer) Act, 1996 (Karnataka Act 18 of 1996);

And whereas, where the State Government has utilized part of the land for any infrastructure project, it may decide to not go ahead with any such infrastructure project, in whole or in part, if so advised in the public interest;

And whereas the State Government may consider, if necessary, to go ahead with any infrastructure project in respect of part of the lands that are vested in the State Government, including the lands described in Schedule I of the Bangalore Palace (Acquisition and Transfer) Act, 1996 (Karnataka Act 18 of 1996);

And whereas any compensation paid for any said utilization is to be calculated proportionately to the amount to be paid in terms of Section 8 of the Bangalore Palace (Acquisition and Transfer) Act, 1996, in respect of the area actually utilized, and any such compensation shall be paid shall be proportionately deducted from the overall compensation under the Bangalore Palace (Acquisition and Transfer) Act, 1996 (Karnataka Act 18 of 1996);

And now this proposed amendment Act seeks to achieve the above purposes and to amend the Bangalore Palace (Utilization and Regulation of Land) Act, 2025 (Karnataka Act 14 of 2025) accordingly.

Be it enacted by the Karnataka State Legislature in the Seventy sixth year of the Republic of India, as follows:-

**1. Short title, application and commencement.-** (1) This Act may be called the Bangalore Palace (Utilization and Regulation of Land) (Amendment) Act, 2025.

(2) It shall apply to the Bangalore Palace.

(3) It shall be deemed to have come into force with effect from the 27th day of January, 2025.

**2. Amendment of section 2.-** In the Bangalore Palace (Utilization and Regulation of Land) Act, 2025 (Karnataka Act 14 of 2025) (hereinafter referred to as the Principal Act) in section 2,-

(i) for clause (D)**,** the following shall be substituted, namely:-

**"(D) Compensation"** shall have the same meaning as in section 8 of the Bangalore Palace (Acquisition and Transfer) Act, 1996 (Karnataka Act 18 of 1996); and, for any part of the Bangalore Palace that is or has been utilized, compensation shall be proportionate to the provisions of the Bangalore Palace (Acquisition and Transfer) Act, 1996 (Karnataka Act 18 of 1996) and any such compensation shall be adjusted against the total compensation payable under the Bangalore Palace (Acquisition and Transfer) Act, 1996 (Karnataka Act 18 of 1996).

**Explanation.-** It is made clear that in the light of section 14B of the Karnataka Town and Country Planning Act, 1961 (Karnataka Act 11 of 1963) no transferable development rights shall be payable as compensation or otherwise in respect of any utilization for any infrastructure projects or matters related thereto"; and

(ii) clause (F) shall be omitted.

**3. Amendment of section 3.-** In the Principal Act, in section 3,-

(i) for sub-section (2), the following shall be substituted, namely:-

"(2) Notwithstanding any earlier decision taken by the State Government, the State Government is empowered to not go ahead with any infrastructure project, in whole or in part, under sub-section (1)";

(ii) for sub-section (5), the following shall be substituted, namely:-

"(5) Notwithstanding anything contained in the Act, in respect of any portion of the Bangalore Palace, if any compensation has already been paid prior to the coming into force of this Act and pursuant to any decision of the State Government in compliance of any judgment or order of any court, it shall be adjusted against the compensation payable under the Bangalore Palace (Acquisition and Transfer) Act, 1996 (Karnataka Act 18 of 1996)"; and

(iii) sub-section (6) shall be omitted.

**4. Amendment of section 4.-** In the Principal Act, in section 4,-

(i) for sub-section (1), the following shall be substituted, namely:-

"(1) For the purpose of this Act, for any part of the Bangalore Palace, which has been utilized, compensation shall be payable as defined in clause (D) of section 2 of this Act";

(ii) for sub-section (2), the following shall be substituted, namely:-

"(2) For the purpose of calculation of compensation for any portion of the Bangalore Palace utilized under sub-section (1) of section 3 of this Act, the proportionate compensation payable for the land so utilized shall be proportionate to the compensation payable for the total land acquired as per sections 8 and 9 of the Bangalore Palace (Acquisition and Transfer) Act, 1996 (Karnataka Act 18 of 1996). "

(iii) for sub-section (3), the following shall be substituted, namely:-

" (3) The compensation payable to the claimants shall be as follows:

(a) an amount being the proportionate value as per sub-section (2) proportionate to the extent of the land utilized as against the total land acquired under the provisions of the Bangalore Palace (Acquisition and Transfer) Act, 1996 (Karnataka Act 18 of 1996); and

(b) shall be adjusted to the payment of final compensation as determined by the Commissioner under section 13 of the Bangalore Palace (Acquisition and Transfer) Act, 1996 (Karnataka Act 18 of 1996);" and

(iv) sub-section (5) shall be omitted.

## STATEMENT OF OBJECTS AND REASONS

**(As appended to at the time of Introduction)**

Whereas the part of the land which was acquired under the Bangalore Palace (Acquisition and Transfer) Act, 1996, was sought to be utilized for an infrastructure project to the extent of 15 acres 17.5 gunta, out of which only 1217.41 square meters has been actually utilized;

And whereas no transferable development rights under section 14B of the Karnataka Town and Country Planning Act, 1961 (Karnataka Act 11 of 1963) will apply to the land vested with the Government pursuant to the Bangalore Palace (Acquisition and Transfer) Act, 1996 (Karnataka Act 18 of 1996);

And whereas it is necessary to empower the State Government to utilize any part of the land that is described in Schedule I of the Bangalore Palace (Acquisition and Transfer) Act, 1996 (Karnataka Act 18 of 1996);

And whereas, where the State Government has utilized part of the land for any infrastructure project, it may decide to not go ahead with any such infrastructure project, in whole or in part, if so advised in the public interest;

And whereas the State Government may consider, if necessary, to go ahead with any infrastructure project in respect of part of the lands that are vested in the State Government, including the lands described in Schedule I of the Bangalore Palace (Acquisition and Transfer) Act, 1996 (Karnataka Act 18 of 1996);

And whereas any compensation paid for any said utilization is to be calculated proportionately to the amount to be paid in terms of Section 8 of the Bangalore Palace (Acquisition and Transfer) Act, 1996, in respect of the area actually utilized, and any such compensation shall be paid shall be proportionately deducted from the overall compensation under the Bangalore Palace (Acquisition and Transfer) Act, 1996 (Karnataka Act 18 of 1996);

And now this proposed Legislation seeks to achieve the above purposes and to amend the Bangalore Palace (Utilization and Regulation of Land) Act, 2025 (Karnataka Act 14 of 2025) accordingly.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**SIDDARAMAIAH**
Chief Minister

**K.R. MAHALAKSHMI**
Secretary
Karnataka Legislative Council

**ANNEXURE**

**Extract from the Bangalore Palace (Utilization and Regulation of Land) Act, 2025(Karnataka Act 14 of 2025)**

**XXX XXX XXX**

**2. Definitions.-** In this Act, unless the context otherwise requires,-

(A) “Bangalore Palace” shall have the same meaning as defined in clause (2) of section 2 of the Bangalore Palace (Acquisition and Transfer) Act, 1996 (Karnataka Act 18 of 1996);

(B) “Infrastructure Project” includes any infrastructure development towards the larger public interest;

(C) “Claimants” shall have the same meaning as,-

(i) “Legal Representatives” and “Heirs” as defined in clause (5) of section 2 of the Bangalore Palace (Acquisition and Transfer) Act, 1996 (Karnataka Act 18 of 1996); and

(ii) “Others”, “Other Persons” and “Other Interested Persons” as defined in clause (6) of section 2 of the Bangalore Palace (Acquisition and Transfer) Act, 1996 (Karnataka Act 18 of 1996);

(D) “Compensation” shall include any amount that is payable and shall also include transferable development rights;

(E) “Commissioner” shall have the same meaning as defined in clause (4) of section 2 of the Bangalore Palace (Acquisition and Transfer) Act, 1996 (Karnataka Act 18 of 1996);

(F) “Transferable development rights” shall have the same meaning as defined in clause (k) of sub-section (28) of section 14B of the Karnataka Town and Country Planning Act, 1961(Karnataka Act 11 of 1963) read with the Karnataka Town and Country Planning (Benefit of Development Rights) Rules, 2016;

**XXX XXX XXX**

**3. Utilization of Land for infrastructure project.-** (1) For the purpose of any infrastructure project, the State Government is empowered to utilize any portion of the Bangalore Palace, which is covered by section 4 of the Bangalore Palace (Acquisition and Transfer) Act, 1996 (Karnataka Act 18 of 1996).

(2) Notwithstanding any judgment or order of any court or any earlier decision taken by the State Government, the State Government is empowered to not go ahead with any infrastructure project, in whole or in part, under sub-section (1).

(3) If the State Government decides to not go ahead with any infrastructure project under sub-section (2), it shall:

(a) restore that part of the portion of the Bangalore Palace which was sought to be utilized under sub-section (1) but subsequently not gone ahead with or not utilized under sub-section (2);

(b) restore the possession of that part of portion the Bangalore Palace as it was, prior to when such land was sought to be utilized under sub-section (1), but subsequently not gone ahead with or not utilized under sub-section (2); and

(c) bear the entire expenditure for (a) and (b).

(4) Notwithstanding anything contained in any other law for time being in force, if the State Government has utilized any part of a portion of the Bangalore Palace under subsection (1), the State Government shall pay compensation to the claimants as per this Act under section 4.

(5) Notwithstanding anything in the Act, in respect of any portion of the Bangalore Palace, if any compensation has already been paid prior to the coming into force of this Act and pursuant to any decision of the State Government in compliance of any judgment or order of any court, section 4 of the Act shall have no application.

(6) Notwithstanding anything in the Act, if any compensation has been paid in respect of any portion of Bangalore Palace land pursuant to any order or judgement of any court, the action of the State Government shall remain protected under section 6 of the Act.

**XXX XXX XXX**

**4. Compensation Payable for Utilization.-** (1) Notwithstanding any judgment or order of any court, or anything contained in any law for the time being in force, which is contrary to this Act, the guidance value of the land shall be in accordance with this Act for the purpose of compensation.

(2) For the purpose of calculation of compensation for any portion of the Bangalore Palace utilized under sub-section (1) of section 3 of this Act, the proportionate value shall be as per section 8 and section 9 of the Bangalore Palace (Acquisition and Transfer) Act, 10 1996 (Karnataka Act 18 of 1996), which shall be

deemed to be the guidance value under section 45B of the Karnataka Stamp Act, 1957 (Karnataka Act 34 of 1957) from the appointed day under the Bangalore Palace (Acquisition and Transfer) Act, 1996 (Karnataka Act 18 of 1996).

Explanation I. – For the determination of "guidance value", the valuation as per the Bangalore Palace (Acquisition and Transfer) Act, 1996 shall be deemed to be guidance value under section 45B of the Karnataka Stamp Act, 1957 (Karnataka Act 34 of 1957) notwithstanding any judgment or order of any court to the contrary.

Explanation II. – The expression "appointed day" shall have the same meaning as under sub-section (1) of section 2 of the Bangalore Palace (Acquisition and Transfer) Act, 1996 (Karnataka Act 18 of 1996), i.e. 21.11.1996.

(3) The compensation payable to the claimants shall be as follows: (a) an amount being the proportionate value as per sub-section (2) proportionate to the extent of the land, or as the case may be; (b) transferable development rights on the proportionate value as per sub-section (2).

(4) The claimants shall have no other right to compensation, other than as prescribed by this Act and notwithstanding any order or judgment of any court.

(5) The compensation under this Act shall be adjusted proportionately towards payment of final compensation as determined by the Commissioner under section 13 of the Bangalore Palace (Acquisition and Transfer) Act, 1996 (Karnataka Act 18 of 1996).

(6) The claimants shall be liable to indemnify the State Government for the utilization of any compensation under sub-section (3), in the event the same is inconsistent with section 8 and section 9 of the Bangalore Palace (Acquisition and Transfer) Act, 1996 (Karnataka Act 18 of 1996).

(7) Notwithstanding any order or judgment of any court to the contrary, or to any other law for the time being in force, the compensation determined under section 8 and section 9 of the Bangalore Palace (Acquisition and Transfer) Act, 1996 (Karnataka Act 18 of 1996) read with this Act shall be final.

(8) In the event of any inconsistency of any order or judgment of any court with this Act, for the determination of compensation of lands utilized under sub-section (1) of section 3, the provisions of this Act shall prevail.

**XXX XXX XXX**

Govt. Press, Vikasa Soudha, Bengalur, 21st Mar, 2025, P7, W.D. , Copies 300